**ಅಪರ ಸ್ವಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ಸ್ವಾಯಾಲಯ ಮಾಗಡಿ**

# ಕ್ರಿಮಿನಲ್ ಪ್ರಕರಣ ಸಂಖ್ಯೆ:39/2012

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಸತೀಶ್ ಮತ್ತು ಇತರರು**

**ಚಾಸಾ:03/**ಪ್ರಾಸಾ:03

| | |
|---|---|
| ಹೆಸರು | **ಕೃಷ್ಣಪ್ಪ** |
| ತಂದೆಯ ಹೆಸರು | **ಚನ್ನಿಗಪ್ಪ** |
| ವಯಸ್ಸು | **76** |
| ಉದ್ಯೋಗ | **ವ್ಯವಸಾಯ** |
| ವಿಳಾಸ | ಚನ್ನಿಗಪ್ಪನಪಾಳ್ಯ |

**ದಿನಾಂಕಃ 30-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 18ರಂದು 2010ನೇ ಇಸವಿಯಲ್ಲಿ ಚಾಸಾ-1ರವರು ಬೋರನ್ನು ಕೊರಿಸುತ್ತಿದ್ದರು, ಆ ಜಾಗ ಚಾಸಾ-1ರವರಿಗೆ ಸೇರಿದ ಜಾಗವಾಗಿತ್ತು. ಆನಂತರ ಹೊನ್ನಪ್ಪ, ರಾಜಶೇಖರಯ್ಯ, ಸತೀಶ್, ಗಂಗಾದರಯ್ಯ, ಈಶ್ವರಪ್ಪ ರವರು ಸೇರಿ ಬೋರ್ ಕೊರೆಯುವುದನ್ನು ತಡೆದಿರುತ್ತಾರೆ. ಈ ಬಗ್ಗೆ ಚಾಸಾ-1ರವರು ಪ್ರಶ್ನೆ ಮಾಡಿದ್ದಕ್ಕೆ ಗ್ರಾಮಸ್ಥರು ಪಂಚಾಯಿತಿ ಮಾಡಿದಾಗ ಆರೋಪಿತರುಗಳು ಬೋರಿಗೆ ಕಲ್ಲು, ಮುಳ್ಳು ತುಂಬಿ ತಡೆದಿರುತ್ತಾರೆ. ಚಾಸಾ-1ರವರು ಏಕೆ ಈಗೆ ಮಾಡಿದ್ದೀರೀ ಎಂದು ಕೇಳಿದ್ದಕ್ಕೆ ಆರೋಪಿತರು ಚಾಸಾ-1ರವರಿಗೆ ಆವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಚಾಸಾ-1ರವರು ಈ ಬಗ್ಗೆ ಕುದೂರು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿರುತ್ತಾರೆ. ದಿನಾಂಕಃ 07.09.2011ರಂದು ಆರೋಪಿತರು ಸುಮಾರು ಸಂಜೆ 4.45 ರಿಂದ 5.00 ಗಂಟೆ ಸಮಯದಲ್ಲಿ ಚಾಸಾ-1ರವರು ಮನೆಯ ಮುಂದೆ ಆರೋಪಿತರು ಹಾಗೂ ಮತ್ತೊಬ್ಬ ರವರು ಚಾಸಾ-1ರವರರನ್ನು

ಮನೆಯ ಹೊರಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ದೊಣ್ಣೆಯಿಂದ, ಮಚ್ಚಿನಿಂದ ಹಾಗೂ 1ನೇ ಆರೋಪಿ ಲಾಂಗ್ ತಂದಿರುತ್ತಾರೆ. ಚಾಸಾ-1ರವರಿಗೆ 1ನೇ ಆರೋಪಿ ಲಾಂಗ್ ನಿಂದ ಬೀಸಿರುತ್ತಾನೆ ಆಗ ಚಾಸಾ-1ರವರು ತಪ್ಪಿಸಿಕೊಂಡಿರುತ್ತಾರೆ. ನಂತರ ಅವರುಗಳು ತಂದಿರುವ ದೊಣ್ಣೆ ಯಿಂದ ಕಾರಿನ ಗ್ಲಾಸ್ ನ್ನು ಪೀಸ್ ಪೀಸ್ ಮಾಡಿರುತ್ತಾರೆ. ನಂತರ 1ನೇ ಆರೋಪಿ ದೊಣ್ಣೆಯಿಂದ ತಲೆಗೆ ಹೊಡೆದ್ದಿದ್ದು, ಚಾಸಾ1ರವರಿಗೆ ರಕ್ತ ಬಂದಿರುತ್ತದೆ. ಚಾಸಾ-1ರವರಿಗೆ ತಲೆಗೆ ಗಾಯವಾಗಿರುತ್ತದೆ ಹಾಗೂ ಮೈಕೈ ಗೆ ಎಲ್ಲಾ ಜಜ್ಜಿದ ಗಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಆ ದಿನ ಜಾತ್ರೆ ಇದ್ದುದರಿಂದ ಜನರು ಅಲ್ಲಿಗೆ ಬಂದಿರುತ್ತಾರೆ. ನಂತರ ಊರಿನ ಜನರು ಬಿಡಿಸಲು ಬಂದಿರುತ್ತಾರೆ. ನಾನು, ಚಾಸಾ-2 ಮತ್ತು 4ರವರು ಜಗಳ ಬಿಡಿಸಿರುತ್ತೇವೆ. ಆರೋಪಿತರುಗಳು ಕಾರಿನ್ನು ಹತ್ತಿಕೊಂಡು ಹೋಗಿರುತ್ತಾರೆ. ಹೋಗುವಾಗ ನಮಗೆ ಹಾಗೂ ಚಾಸಾ-1ರವರಿಗೆ ಬೈದು ಬೆದರಿಕೆ ಹಾಕಿ ಹೋಗಿರುತ್ತಾರೆ. ನಂತರ ಚಾಸಾ-1ರವರು ದೂರನ್ನು ನೀಡಿರುತ್ತಾರೆ. ಸದರಿ ವಿಚಾರದ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಮಾರನೇ ದಿವಸ ಪೋಲೀಸರು ಘಟನಾ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೋಲೀಸರು ಸ್ಥಳಕ್ಕೆ ಬಂದಾಗ ನಾನು, ಚಾಸಾ-1, 8 ರಿಂದ 10 ರವರುಗಳು ಇದ್ದೇವು. ಅಲ್ಲಿ ಪೋಲೀಸರು ಒಂದು ಬಿದಿರು ದೊಣ್ಣೆ, ಒಂದು ಕಾಡು ದೊಣ್ಣೆ, ಮತ್ತು ಲಾಂಗ್ ನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ರಕ್ತದ ಕಲೆಯಾಗಿರುವ ಬಟ್ಟೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಎಂ.ಒ 1 ರಿಂದ 5ನ್ನು ನೋಡಿ ಗುರುತಿಸಿರುತ್ತಾರೆ. ಇಂದು ನ್ಯಾಯಾಲಯದ ಮುಂದೆ 1ನೇ ಆರೋಪಿಯುನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ಮತ್ತು 3ನೇ ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು, 2 ಮತ್ತು 3ನೇ ಆರೋಪಿಗಳ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿಗಳ ಪರ ವಕೀಲರು ನುಡಿದಿರುತ್ತಾರೆ.

ಪಾಟೀ **ಸವಾಲು :- ಶ್ರೀ. ಎಂ.ಎಸ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ:-

ಈ ದಿನ ನ್ಯಾಯಾಲಯಕ್ಕೆ ನಿಮ್ಮ ಚಾಸಾ-1ರವರೇ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ, ನಾಯ್ಯಾಲಯದಿಂದ ನನಗೆ ಸಮನ್ಸ್ ಬಂದಿರುತ್ತದೆ ನಾನೇ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

ಈ ದಿನ ನೀವು ಏನು ಸಾಕ್ಷಿ ನುಡಿಯಬೇಕು ಎಂದು ಚಾಸಾ-1ರವರೇ ನ್ಯಾಯಾಲಯದಲ್ಲಿ ಕುಳಿತುಕೊಂಡು ಹೇಳಿಕೊಡುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ-1ರವರು ನ್ಯಾಯಾಲಯದಲ್ಲಿ ಮಾತನಾಡಿಕೊಂಡು ಈ ದಿವಸ ಕುಳಿತುಕೊಂಡಿರುತ್ತೀರೀ ಎಂದರೆ ಸರಿ. ನೀವು ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವುದನ್ನು ಹೊರತುಪಡಿಸಿ, ಬೇರೆ ಎಷ್ಟು ಕೇಸುಗಳಲ್ಲಿ ಸಾಕ್ಷಿ ನುಡಿದಿರುತ್ತೀರೀ ಎಂದರೆ ಸಾಕ್ಷಿಯು ಎಲ್ಲಿಯೂ ಸಾಕ್ಷಿ ನುಡಿದಿಲ್ಲ ಎಂದು ನುಡಿಯುತ್ತಾರೆ. ಬೋರ್ ವೆಲ್ ವಿಚಾರಕ್ಕೆ ಗಲಾಟೆ ಆದಾಗ ನೀವು ಜಾಗದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಬೋರ್ ವೆಲ್ ಕೊರೆಸಲು ಶುರು ಮಾಡಿದಾಗಿನಿಂದಲೂ ಅಲ್ಲಿಯೇ ಇದ್ದೇ ಎಂದು ನುಡಿಯುತ್ತಾರೆ. ಬೋರ್ ವೆಲ್ ವಿಚಾರಕ್ಕೆ ಚಾಸಾ-1ರವರು ಈ ಆರೋಪಿತರ ಮೇಲೆ ಮತ್ತೊಂದು ದಾವೆಯನ್ನು ಹೂಡಿದ್ದರು ಎಂದರೆ ಸರಿಯಲ್ಲ.

2. ನಿಮ್ಮ ಗ್ರಾಮ ಮತ್ತು ಚಾಸಾ-1ರವರ ಗ್ರಾಮಕ್ಕೂ ಸುಮಾರು 1 ಕಿ.ಮೀ ಅಂತರ ಇದೆ ಎಂದರೆ ಸಾಕ್ಷಿಯು ಇಲಲ್ಲ ಅರ್ದ ಕಿ.ಮೀ ಅಂತರ ಇದೆ ಎಂದು ನುಡಿಯುತ್ತಾರೆ. ನೀವು ಏನು ವಿದ್ಯಾಬ್ಯಾಸ ಮಾಡಿರುತ್ತೀರೀ ಎಂದರೆ ಸಾಕ್ಷಿಯು ಎಸ್.ಎಸ್.ಎಲ್.ಸಿ ವರೆಹಗೂ ವಿದ್ಯಾಬ್ಯಾಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಎಸ್.ಎಸ್.ಎಲ್.ಸಿ ಗೆ ಸೇರಿದ ದಿನಾಂಕ ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.ನೀವು ದ್ವಿತೀಯ ಪಿ.ಯು.ಸಿ ದಿನಾಂಕ ಗೊತ್ತಾ ಎಂದರೆ ಸಾಕ್ಷಿಯು 1972ರಲ್ಲಿ ಪಿ.ಯು.ಸಿ ಇದ್ದೆ ಎಂದು ನುಡಿಯುತ್ತಾರೆ. ದಿಃ07.09.2011ರಂದುಏನು ವಿಶೇಷ ಇತ್ತು ಎಂದರೆ ಸಾಕ್ಷಿಯು ಉಡುಕುಂಟೆ ಗ್ರಾಮದಲ್ಲಿ ಜಾತ್ರೆ ಇತ್ತು ಎಂದು ನುಡಿಯುತ್ತಾರೆ. ಜಾತ್ರೆಯಲ್ಲಿ ಸಾವಿರಾರು ಜನ ಸೇರಿರುತ್ತಾರೆ ಎಂದರೆ ಸಾಕ್ಷಿಯು ಸಾವಿರಾರು ಇಲ್ಲ ನೂರಾರು ಜನ ಸೇರಿರುತ್ತಾರೆ ಎಂದು ನುಡಿಯುತ್ತಾರೆ. ಉಡುಕುಂಟೆ ಗ್ರಾಮದವರು ಎಲ್ಲರೂ ಸಹ ಆ ಜಾತ್ರೆಯಲ್ಲಿ ಬಾಗವಹಿಸಿದ್ದರು ಎಂದರೆ ಸರಿ.

3. ನೀವು ಆರೋಪಿತರು ಬಂದು ಗಲಾಟೆ ಮಾಡಿದರು ಎಂದು ಹೇಳುವ ಸಮಯದಲ್ಲಿ ಉಡುಕುಂಟೆ ಗ್ರಾಮದವರು ಯಾರು ಇರಲಿಲ್ಲವಾ ಎಂದರೆ ಸಾಕ್ಷಿಯು ಇದ್ದರು ಎಂದು ನುಡಿಯುತ್ತಾರೆ. ಉಡುಕುಂಟೆ ಗ್ರಾಮದವರು ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿಯು ಪ್ರಕಾಶ್ ಚಾಸಾ-5 ಮತ್ತು ಚಲುವಯ್ಯ ರವರು ಇದ್ದರು ಎಂದು

ನುಡಿಯುತ್ತಾರೆ. ಚಲುವಯ್ಯನವರು ಗುಡೇಮಾರನಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ಅದರೆ ಅವರು ಉಡುಕುಂಟೆ ಗ್ರಾಮದ ಜಾತ್ರೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಬೋರ್ ವೆಲ್ ವಿಚಾರವಾಗಿ ಚಾಸಾ-1ರವರು ಮತ್ತೊಂದು ಕೇಸನ್ನು ಹೂಡಿದ್ದಾರು ಆ ಕೇಸ್ ನಲ್ಲಿ ಆರೋಪಿತರುಗಳು ಬಿಡುಗಡೆ ಆಗಿರುತ್ತಾರೆ ಆಗಾಗಿ ಚಾಸಾ-1ರವರು ಮತ್ತೊಂದು ಕೇಸನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರುಗಳು ಯಾವ ಕಾರಿನಲ್ಲಿ ಬಂದಿರುತ್ತಾರೆ ಎಂದರೆ ಸಾಕ್ಷಿಯು ಕೆಂಪು ಬಣ್ಣದ ಮಾರುತಿ ಕಾರಿನಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿನ ಕಾರಿನ ನಂಬರ್ ಏನು ಎಂದರೆ ಸಾಕ್ಷಿಯು ನಂಬರ್ ಗೊತ್ತಿಲ್ಲ ಎಂದು ನುಡಿಯುುತ್ತಾರೆ. ಚಾಸಾ-1ರವರ ಕಾರಿನ ನಂಬರ್ ಏನು ಎಂದರೆ ಸಾಕ್ಷಿಯು ಕೆಎ-ಎಂ.ಡಿ-2123 ಎಂದು ನುಡಿಯುತ್ತಾರೆ.

4. ಪೋಲೀಸರು ಆರೋಪಿತರುಗಳ ಹಾಗೂ ಚಾಸಾ-1ರವರ ಕಾರುಗಳನ್ನು ಅಮಾನತುಪಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಪೋಲೀಸರಿಗೆ ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.ಗಲಾಟೆ ಯಾದ ಎಷ್ಟು ದಿನಕ್ಕೆ ಹೇಳಿಕೆ ನೀಡಿರುತ್ತೀರೀ ಎಂದರೆ ಸಾಕ್ಷಿಯು ಮಾರನೇ ದಿನಕ್ಕೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪೋಲೀಸರಿಗೆ ನೀವು ಯಾವುದೇ ಹೇಳಿಕೆ ನೀಡಿಲ್ಲ ಅವರು ನಿಮ್ಮ ಹೇಳಿಕೆಯನ್ನು ಸಹ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ದೊಣ್ಣೆಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆರೋೀಪಿತರು ಗಲಾಟೆ ಯಾದ ಜಾಗದಲ್ಲಿ ಬಿಸಾಡಿ ಹೋಗಿರುತ್ತಾರೆ, ಪೋಲೀಸರು ಅದನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ದಿನಕ್ಕೆ ಪೋಲೀಸರು ಆ ದೊಣ್ಣೆಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಗಲಾಟೆ ಯಾದ ಮಾರನೇ ದಿನ ವಶಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ಆ ರೀತಿ ಅಮಾನತು ಪಡಿಸಿಕೊಂಡಾಗ ನೀವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮಾಡಿದ್ದೇನೆ ಎಂದು ನುಡಿಯುತ್ತಾರೆ.ಪೋಲೀಸರು ಘಟನಾ ಸ್ಥಳಕ್ಕೂ ಬಂದಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಪೋಲೀಸರು ಬಂದಿಐದ್ದು ನಿಜ ಹಾಗೂ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದು ನಿಜ ಎಂದು ನುಡಿಯುತ್ತಾರೆ. ಅರೋಪಿತರು ಚಾಸಾ-1ರವರಿಗೆ ದೊಣ್ಣೆಯಿಂದ ಹಾಗೂ ಲಾಂಗ್ ನಿಂದ

ಹೊಡೆದಿರುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1ರವರಿಗೆ ಆರೋಪಿತರುಗಳು ಪ್ರಾಣ ಬೆದರಿಕೆ ಹಾಕಿರುವುದು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಚಾಸಾ-1ರವರ ಮಾತನ್ನು ಕೇಳಿಕೊಂಡು ಆರೋಪಿತರುಗಳ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರೀ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**